**Q.P. Code – 32404**

# Fourth Semester B.Sc./B.C.A. Degree Examination, April/May 2019

*(CBCS – Semester Scheme)*

**ಕನ್ನಡ ಭಾಷೆ**

## Paper IV – ಕರ್ವಾಲೋ ಮತ್ತು ಭಾಷಾಕಿರಣ – 4

*Time : 3 Hours]* *[Max. Marks : 90*

ಭಾಗ – ಅ

ಕರ್ವಾಲೋ

I. (ಅ) **ಒಂದರ** ಸ್ವಾರಸ್ಯವನ್ನು ಬರೆಯಿರಿ : **(1 × 5 = 5)**

1. "ಮೈ ಡಿಯರ್ ಯಂಗ್ ಮ್ಯಾನ್, ನಿಮಗೆ ಕೆಲವು ವಿಷಯ ಕೆಲವು ಕಾರಣಗಳಿಂದ ಈಗ ಹೇಳಲಾರೆ. ನೀವು ಮಾಡಬೇಕಾದ್ದು ಈಗ ಸುಮ್ಮನೆ ಕಾಯಬೇಕು. ಈಗ ಸದ್ಯಕ್ಕೆ ಮಂದಣ್ಣನನ್ನು ಹೇಗಾದರೂ ಮಾಡಿ ನಾವು ಪಾರು ಮಾಡಬೇಕು. ಜುಲ್ಮಾನೆ ಆರು ನೂರಲ್ಲಿ ಆರು ಸಾವಿರ ಆದರೂ ನಾನು ಕೊಡ್ತೀನಿ ಸಜಗಿಜ ಆಗಿ ಒಂದು ವರುಷ ಜೈಲಿಗೆ ಹೋದರೆ ನನ್ನ ಕಥೆ ಮುಗಿದಂತೆಯೇ".

2. "ಏನಯ್ಯ ಲಕ್ಷ್ಮಣ, ನಿನ್ನೆ ಮಂದಣ್ಣನನ್ನು ಪೋಲೀಸ್ನೋರು ಹಿಡಕೊಂಡು ಬಂದು ಲಾಕಪ್ಪಿಗೆ ಹಾಕಿದರಂತೆ. ಕಳ್ಳಭಟ್ಟಿ ಷರಾಬು ಮಾಡ್ತಿದ್ದಾರಂತ ನಾರ್ವೆ ರಾಮಯ್ಯನ ಮನೆಗೆ ರೈಡ್ ಮಾಡಿದರಂತೆ ಮಂದಣ್ಣನ ಜೇನಿನ ಮಡಕೇನೇ ಷರಾಬು ಕಾಯಿಸೋ ಕೊಳೆ ಅಂತ ಹೇಳಿ ಹಿಡಿದು ಹೊರಿಸಿಕೊಂಡು ಬಂದಿದ್ದಾರಂತೆ.

(ಆ) **ಎರಡನ್ನು** ಸಂದರ್ಭ ಸಹಿತ ವಿವರಿಸಿ : **(2 × 3 = 6)**

1. "ಅದು ಅಲ್ಲಾ ಕೈಲಿ ಬಿಸ್ಮಿಲ್ಲಾ ಮಾಡಿಸ್ಕಳಲಿಲ್ಲವಂತೆ".
2. "ನಾ ಯಾವ ಬಿಕನಾಸೀಂತ ನನ್ನ ಆಫೀಸಿನೊಳಗೆ ಬಿಡ್ತಾರೆ ಸ್ವಾಮಿ".
3. "ಸಾರ್ ಮುಂಡಾನ ಅನ್ನೋರು ಯಾರಾದರೂ ಇಲ್ಲಿದ್ದಾರ?" ಎಂದ.

(ಇ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಮಂದಣ್ಣನ ಮಾವನ ಹೆಸರೇನು?
2. 'ಮೌಮೌಬೀ' ಯಾವ ದೇಶದಲ್ಲಿ ಕಂಡು ಬರುತ್ತದೆ?
3. ಸರ್ವೇಯರ್ ನಾರಾಯಣನನ್ನು ಕೊಂದ ಪ್ರಾಣಿ ಯಾವುದು?
4. ಮಂದಣ್ಣನನ್ನು ಕೇಸಿನಿಂದ ಪಾರು ಮಾಡಿದ ಚಿಕ್ಕಮಗಳೂರಿನ ಪ್ರಸಿದ್ಧ ಕ್ರಿಮಿನಲ್ ಲಾಯರ್ ಯಾರು?
5. ಲೇಖಕರ ಗದ್ದೆಯಲ್ಲಿ ಕಾಣಿಸಿಕೊಂಡಿದ್ದ ಹುಳುವಿನ ಹೆಸರೇನು?

(ಈ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2 × 2 = 4)**

1. ಕರಿಯಪ್ಪ
2. ನಾರ್ವೆ
3. ಪ್ಯಾರ

II. (ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(2 × 5 = 10)**

1. ಮಂದಣ್ಣನು ಕಳ್ಳಭಟ್ಟಿ ಹಗರಣದಲ್ಲಿ ಸಿಲುಕಿಕೊಂಡ ಬಗೆ
2. ತೇಜಸ್ವಿಯವರಿಗೆ 'ಕಿವಿ'ಯೊಂದಿಗಿರುವ ಬಾಂಧವ್ಯ
3. ಹಾರುವ ಓತಿಯನ್ನು ಅನ್ವೇಷಿಸುವಲ್ಲಿ ಪ್ರಭಾಕರ ನೀಡಿದ ಸಹಕಾರ

(ಆ) **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಕರ್ವಾಲೋ ಪಾತ್ರವನ್ನು ಪರಿಚಯಿಸಿ.
2. ಲಕ್ಷ್ಮಣ, ನಾರ್ವೆ ರಾಮಯ್ಯ , ಎಂಗ್ಟ – ಇವರಲ್ಲಿ ಇಬ್ಬರ ಪಾತ್ರವನ್ನು ಪರಿಚಯಿಸಿ.
3. ಹಾರುವ ಓತಿ ಕರ್ವಾಲೋ ಕಾದಂಬರಿಯನ್ನು ವ್ಯಾಪಿಸಿರುವ ಬಗೆಯನ್ನು ವಿವರಿಸಿ.

ಭಾಗ – ಆ

ಭಾಷಾಕಿರಣ – 4

III. (ಅ) **ಒಂದರ** ಸ್ವಾರಸ್ಯವನ್ನು ವಿವರಿಸಿ : **(1 × 5 = 5)**

1. ಅನಕ್ಷರತೆ ಮತ್ತು ಬಡತನದ ಬೇಗೆಯಲ್ಲಿ ಬೇಯುತ್ತಿರುವ ಇಂಡಿಯಾದ ಜನತೆಯ ಪ್ರಜ್ಞೆಯ ಬೆಳವಣಿಗೆ ಆಯಾ ಪ್ರಾಂತೀಯ ಭಾಷೆಗಳ ಸರ್ವತೋಮುಖ ಬೆಳವಣಿಗೆಯನ್ನೂ ಅವಲಂಬಿಸಿದೆಯೆಂಬುದನ್ನು ಎಲ್ಲ ಭಾಷೆಯ ಜನರೂ ಒಪ್ಪಿಕೊಂಡು ಮಾತೃ ಭಾಷೆಯ ಕಲಿಕೆಯ ಅವಕಾಶವನ್ನು ಉಳಿಸಿಕೊಳ್ಳಬಹುದು. ಇದರಿಂದ ವ್ಯಕ್ತಿ. ವ್ಯಕ್ತಿ ಸಮೂಹ ಮತ್ತು ರಾಜ್ಯಗಳ ಕೀಳರಿಮೆ ಕಿತ್ತು ಹೋಗಿ ಕತ್ತೆತ್ತಿ ನಡೆಯುವ ಆತ್ಮಸ್ಥೈರ್ಯ ಮತ್ತು ಹೋರಾಟದ ಹುಮ್ಮಸ್ಸು ರೂಪುಗೊಳ್ಳಲು ಸಾಧ್ಯ.

2. ಎಂಜಿನಿಯರ್ ಇರಲಿ, ವೈದ್ಯರಿರಲಿ, ವಿಜ್ಞಾನಿಯಿರಲಿ, ಯಾರೂ ತಂತಮ್ಮ ಕ್ಷೇತ್ರಗಳಲ್ಲಿ ಸಂವಹನದ ಪಾತ್ರವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಸಂವಹನ ಚೆನ್ನಾಗಿ ಮಾಡಬಲ್ಲವರೇ ಎಲ್ಲಾ ಕ್ಷೇತ್ರಗಳ ನಾಯಕರು, ವಿಜ್ಞಾನಿಯೊಬ್ಬ ಎಷ್ಟೇ ಮಹತ್ವ ಪೂರ್ಣ ಸಂಶೋಧನೆ ಮಾಡಿದರೂ ಅದನ್ನು ಇತರರಿಗೆ ತಿಳಿಸುವ ಸಂವಹನದ ಚಾಕಚಕ್ಯತೆಯಿಲ್ಲದಿದ್ದರೆ ಸೋಲುತ್ತಾನೆ.

(ಆ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಇಂಗ್ಲೀಷಿನ 'Communication' ಪದವು ಯಾವ ಭಾಷೆಯ ಮೂಲದಿಂದ ಬಂದಿದೆ?
2. ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದ ಚಾವುಂಡರಾಯನ ಕೃತಿಯ ಹೆಸರೇನು?
3. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಜನ್ಮ ತಳೆದ ವರ್ಷ ಯಾವುದು?
3. ಬಾಲ ಪ್ರಪಂಚ ಸಂಪುಟಗಳು ಹೊರಬರಲು ಶ್ರಮಿಸಿದವರು ಯಾರು?
5. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಕೃಷಿ ಮಾಡಿದ ಲೇಖಕರೊಬ್ಬರನ್ನು ಹೆಸರಿಸಿ.

(ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2 × 5 = 10)

1. ಬರಗೂರು ರಾಮಚಂದ್ರಪ್ಪ
2. ವಿಜ್ಞಾನ ಸಾಹಿತ್ಯದಲ್ಲಿ ಅನುವಾದ
3. ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಜಿ.ಟಿ. ನಾರಾಯಣರ ಕೊಡುಗೆ

IV. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ : (2 × 10 = 20)

1. ಭಾಷೆ ಮತ್ತು ತಂತ್ರಜ್ಞಾನಗಳ ಸಂಬಂಧ ಕುರಿತು ಕೆ.ವಿ. ನಾರಾಯಣರ ಅಭಿಪ್ರಾಯಗಳನ್ನು ಕುರಿತು ಬರೆಯಿರಿ.
2. ಸಂವಹನ ಎಂದರೇನು? ಪರಿಣಾಮಕಾರಿ ಸಂವಹನದ ಲಕ್ಷಣಗಳನ್ನು ನಿರಂಜನ ವಾನಳ್ಳಿಯವರ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.
3. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಡೆದು ಬಂದ ದಾರಿಯನ್ನು ಕುರಿತು ಬರೆಯಿರಿ.